## ಮದುವೆ ಬಜೆಟ್



ಫೆ.13ರ ಸಂಚಿಕೆಯಲ್ಲಿ ಪ್ರಕಟವಾದ ಸುರೇಖಾ ಹೆಗಡೆ ಅವರು ಬರೆದ ‘ಮದುವೆ ಬಜೆಟ್’ ಲೇಖನ ಓದಿದೆ. ಇತ್ತೀಚಿನ ದಿನಗಳಲ್ಲಿ ಎತ್ತನೋಡಿದರೂ ವೈಭವೋಪೇತ ವಿವಾಹಗಳ ಸಂಖ್ಯೆ ಏರುತ್ತಲೇ ಇದೆ. ಇಂತಹ ಅದ್ದೂರಿ ಮದುವೆಗಳಲ್ಲಿ ಆಹ್ವಾನಿತರ/ಬಂಧು ಮಿತ್ರರ ನಾಲಿಗೆ ರುಚಿ ತಣಿಸಲು ವೈವಿಧ್ಯಮಯ ಆಹಾರ ತಯಾರಿಸಿ ಕನಿಷ್ಠ ಏನಿಲ್ಲವೆಂದರೂ ಶೇ 25ರಷ್ಟು ತಿನ್ನುವ ಆಹಾರ ಪೋಲು ಮಾಡುತ್ತಿರುವುದು ಅಷ್ಟೇ ಖೇದ ಉಂಟು ಮಾಡುತ್ತಿದೆ. ಇದು ಎಲ್ಲರೂ ಗಾಢವಾಗಿ ಚಿಂತಿಸಬೇಕಾದ ವಿಷಯ. ತಮ್ಮ ಮಗನ/ಮಗಳ ಮದುವೆಗೆಂದು ಮಾಡುವ ವೆಚ್ಚದಲ್ಲಿ ಕನಿಷ್ಠ ಕಾಲು ಭಾಗದ ಮೊತ್ತವನ್ನು, ಸುತ್ತಲಿನ ಸಮಾಜದಲ್ಲಿ, ಎರಡು ಹೊತ್ತಿನ ಊಟಕ್ಕೂ ಗತಿಯಿಲ್ಲದ, ತೆರೆಮೇಲೆ ಸೂರಿಲ್ಲದೇ ಬದುಕು ನೂಕುತ್ತಿರುವ ಜನರಿಗೆ ಶಾಶ್ವತ ನೆಲೆ ಕಲ್ಪಿಸುವ ನಿಟ್ಟಿನಲ್ಲಿ ಖರ್ಚು ಮಾಡಿದ್ದೇ ಆದಲ್ಲಿ ಆ ಹಣ ಸಾರ್ಥಕವಾಗುತ್ತದೆ.

—ಅರವಿಂದ. ಜಿ. ಜೋಷಿ, ಮೈಸೂರು

## ಮೂಷಿಕವೂ ಮಾತೃಹೃದಯವೂ

ಫೆ. 13ರ ಸಂಚಿಕೆಯಲ್ಲಿ ಡಾ. ಮುರಳೀಧರ ಕಿರಣಕೆರೆ ಬರೆದಿರುವ ‘ಮೂಷಿಕವೂ ಮಾತೃಹೃದಯವೂ’ ವಿನೋದ ಲೇಖನ ಓದಿ ಖುಷಿಯಾಯಿತು. ಕೆಲವು ವರ್ಷಗಳ ಹಿಂದೆ ನನ್ನ ಮನೆಯಲ್ಲಿ ಸಿಕ್ಕಿದ್ದ ಹಸಿ ಮುದ್ದೆಯಂತಿದ್ದ ಇಲಿಮರಿಗಳಿಗೆ, ಹತ್ತಿಯನ್ನು ಹಾಲಿನಲ್ಲಿ ಅದ್ದಿ ಕುಡಿಸಿ, ಆರೈಕೆ ಮಾಡಿದ್ದು ನೆನಪಿಗೆ ಬಂತು. ಎಂತಹ ಕ್ಷುದ್ರ ಜೀವಿಯೇ ಆದರೂ ಅದಕ್ಕೂ ಜೀವಿಸುವ ಹಕ್ಕು ಇದೆಯಲ್ಲವೇ ಎಂಬ ಮಾನವೀಯ ಮೌಲ್ಯ ಮೆಚ್ಚುಗೆಯಾಯಿತು.

—ಮಹೇಶ್ವರ ಹುರುಕಡ್ಲಿ ಬಾಚಿಗೊಂಡನಹಳ್ಳಿ

## ನಗೆ ಹೂವು ಬಾಡದಿರಲಿ

ಫೆ. 6ರ ಸಂಚಿಕೆಯಲ್ಲಿ ಮಹತಿ ಬರೆದಿರುವ ‘ನಗೆ ಹೂವು ಬಾಡದಿರಲಿ’ ಲೇಖನ, ತಾಯಿಯ ಹೊಟ್ಟೆಯಿಂದ ಹುಟ್ಟಿದವರೆಲ್ಲರೂ ತಲೆ ತಗ್ಗಿಸುವಂತೆ ಮಾಡುತ್ತದೆ. ನಮ್ಮ ‘ಸಂಸ್ಕೃತಿ’ ‘ಸಂಸ್ಕಾರ’ಗಳು ಕೇವಲ ಪದಗಳಾಗಿಯೇ ಉಳಿದಿವೆಯೇ ಅಥವಾ ಅಳಿವಿನಂಚಿಗೆ ಬಂದಿವೆಯೇ ಎಂಬ ಸಂಶಯವೂ ಮೂಡುತ್ತಿದೆ. ಬುದ್ಧಿವಿಕಸನದ ಜೊತೆಗೆ ಹೃದಯ ವಿಕಸನಕ್ಕೆ ಪ್ರಾಮುಖ್ಯತೆ ಕೊಡದ ವಿದ್ಯೆಯ ಫಲವೂ; ಶಾಲಾ – ಕಾಲೇಜಿನ ಕಡ್ಡಾಯ ಪಠ್ಯಕ್ರಮದಲ್ಲಿ ಮೌಲ್ಯ ಶಿಕ್ಷಣ ಮುಖ್ಯವಲ್ಲ ಎಂಬ ಧೋರಣೆಯೂ ಕಾರಣವಿರಬಹುದು. ಕೊಳ್ಳುಬಾಕ ಸಂಸ್ಕೃತಿಯಲ್ಲಿ ನ್ಯಾಯವನ್ನೂ ಖರೀದಿಸಬಹುದು. ಇದನ್ನರಿತ ಲಜ್ಜೆಗೆಟ್ಟವರು ನೆಲದ ಕಾನೂನಿಗೆ ಸೆಡ್ಡು ಹೊಡೆಯುತ್ತಲೇ ಇರುತ್ತಾರೆ. ಒಂದು ಕಾನೂನು ‘ಹಿಡಿ’ ಎಂದು ಮತ್ತೊಂದು ಕಾನೂನು ‘ಬಿಡು’ ಎಂದೂ ಇರುವಾಗ ಇಂತಹ ದೌರ್ಜನ್ಯಗಳಿಗೆ ಕೊನೆಯಿರದು. ‘ವಸ್ತುಗಳನ್ನು ಪ್ರೀತಿಸು’ – ‘ಮನುಷ್ಯನನ್ನು ಬಳಸು’ ಹಾಗೂ ‘ಬಳಸಿರಿ ಮತ್ತು ಎಸೆಯಿರಿ’ ಮನಃಸ್ಥಿತಿ ಕೂಡ ಕಾರಣವಿರಬಹುದು.

—ಫಾ. ಎಡ್ವರ್ಡ್ ರೊಡ್ರಿಗಸ್ ಎಸ್. ಜೆ., ಬೆಂಗಳೂರು

## ಕೊರಗರ ಏಳಿಗೆ

ದಿ. 6ರ ಸಂಚಿಕೆಯಲ್ಲಿ ಪ್ರಕಟವಾದ ‘...ಸಮಗ್ರ ಗ್ರಾಮೀಣ ಆಶ್ರಮ’ ಲೇಖನ ಓದಿದೆ. ಪರಿಶಿಷ್ಟ ಜಾತಿಗೆ ಸೇರಿದ ಈ ಕೊರಗರದು ತೀರಾ ಹಿಂದುಳಿದ ಜನಾಂಗವಾಗಿತ್ತು! ಸುಮಾರು 45 ವರ್ಷಗಳ ಹಿಂದೆ ನಾನು ಈ ಜನಾಂಗದ ಬಗ್ಗೆ ಬರೆದ ಲೇಖನ ಒಂದು ‘ಪ್ರಜಾವಾಣಿ’ಯಲ್ಲಿ ಪ್ರಕಟವಾಗಿತ್ತು. ಈಗ ಈ ಭರಪೂರ ಮಾಹಿತಿಯ ಲೇಖನ ಓದಿ, ಈಗ ಇವರೆಲ್ಲ ಸುಧಾರಿಸಿರುವದು ತಿಳಿದು ಹರ್ಷವಾಯಿತು.

—ನಾರಾಯಣ ಯಾಜಿ, ಶಿರಾಲಿ

## ಎಲ್ಲಮ್ಮನ ಜಾತ್ರೆಯ ದರ್ಶನ

ಫೆ. 6ರ ಸಂಚಿಕೆಯಲ್ಲಿ ಎಂ. ಮಹೇಶ ಅವರ ಲೇಖನ ಸಂಸ್ಕೃತಿ ‘ಉಧೋ ಉಧೋ ಎಲ್ಲಮ್ಮನ ಜಾತ್ರೆ’ ಎಲ್ಲರಿಗೂ ಮನೆಯಲ್ಲಿ ಕುಳಿತೇ ಜಾತ್ರೆಯ ದರ್ಶನ ಮಾಡಿಸುವ ಹಾಗಿದೆ.



ಹಾಗೆಯೇ ‘ನಿಮ್ಮೊಡನೆ’ ಪುಟದಲ್ಲಿ ಎನ್. ಉದಯಕುಮಾರ್ ಅವರು ಬರೆದಿರುವ ಮೂಢನಂಬಿಕೆಯ ಕುರಿತಾದ ಲೇಖನವೂ ಅಷ್ಟೇ ಚೆನ್ನಾಗಿದೆ. ಅವರು ಹೇಳಿದಂತೆ ಹೆಣ್ಣುಮಕ್ಕಳು ಇದಕ್ಕೆ ಬಲಿಯಾಗುತ್ತಾರೆ. ಇದು ಕಡಿಮೆಯಾಗಬೇಕು. ಸರ್ಕಾರ ಎಷ್ಟು ಕಾಯ್ದೆ ಕಾನೂನು ಮಾಡಿದರೂ ಜನರು ಇನ್ನೂ ಈ ಮೂಢನಂಬಿಕೆಗೆ ಬಲಿಯಾಗುತ್ತಿದ್ದಾರೆ.

—ಬಸಪ್ಪ ಸೋ. ಮುಳ್ಳೂರ್, ಹಲಗತ್ತಿ

## ಸೀರೆ ಮೇಲೆ ಅಷ್ಟೋತ್ತರ

ಫೆ. 13ನೇ ಸಂಚಿಕೆಯಲ್ಲಿ ‘ಸೀರೆ ಕಸೂತಿ ಕಲೆಯಲ್ಲಿ ಮಹಾಲಕ್ಷ್ಮಿ ಅಷ್ಟೋತ್ತರ’ ಶತನಾಮಾವಳಿ ಮೂಡಿಸಿರುವ ಬೆಂಗಳೂರಿನ ಪದ್ಮಾ ಮಂಜುನಾಥ್ ಅಭಿನಂದನೀಯರು. ವಸ್ತ್ರದ ಮೇಲೆ ಕಸೂತಿ ರಚಿಸಿರುವ ಈ ಕಲಾವಿದೆಯನ್ನು ಮಂಜುನಾಥ ಡಿ. ಎಸ್. ಪರಿಚಯಿಸಿದ್ದು ಖುಷಿನೀಡಿತು.

—ಪಿ. ಜಯವಂತ ಪೈ, ಕುಂದಾಪುರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in

